**ಕರ್ನಾಟಕ ವಿಧಾನ ಪರಿಷತ್ತು**

**ನೂರ ಮೂವತ್ತೇಳನೆಯ ಅಧಿವೇಶನ**

# ಸಾರಾಂಶ

(ದಿನಾಂಕ: 06.02.2019 ರಿಂದ 14.02.2019ವರೆಗೆ)

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನ ಸೌಧ, ಬೆಂಗಳೂರು-560 001

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೇಳನೆಯ ಅಧಿವೇಶನ

### ಸಾರಾಂಶ

(ದಿನಾಂಕ: 06.02.2019 ರಿಂದ 14.02.2019ವರೆಗೆ)

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನ ಸೌಧ, ಬೆಂಗಳುರು-560 001

## ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ನೂರ ಮೂವತ್ತೇಳನೆಯ ಅಧಿವೇಶನವು ದಿನಾಂಕ: 06.02.2019 ರಿಂದ 14.02.2019ರ ವರೆಗೆ ಒಟ್ಟು 07 ದಿನಗಳ ಉಪವೇಶನ ನಡೆಯಿತು. ಅಧಿವೇಶನದ ಒಟ್ಟು ಅವಧಿ 10 ಗಂಟೆ 20 ನಿಮಿಷಗಳು. (**ವಿವರಣಾ ಪಟ್ಟಿ**-1)

### 01. ರಾಜ್ಯಪಾಲರ ಭಾಷಣ

ದಿನಾಂಕ:**06.02.2019** ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸದನದಲ್ಲಿ ಮಂಡಿಸಿದರು. ಸದರಿ ಭಾಷಣದ ಮೇಲಿನ ವಂದನಾರ್ಪಣಾ ಪ್ರಸ್ತಾವವನ್ನು ದಿನಾಂಕ:**13.02.2019** ರಂದು ಅಂಗೀಕರಿಸಲಾಯಿತು.

### 02. ಸಂತಾಪ ಸೂಚನೆಗಳು

**ಈ ಕೆಳಕಂಡ ಗಣ್ಯವ್ಯಕ್ತಿಗಳು ನಿಧನರಾದುದಕ್ಕೆ ಸದನದಲ್ಲಿ ಸಂತಾಪವನ್ನು ವ್ಯಕ್ತಪಡಿಸಲಾಯಿತು.**

| ಕ್ರ.ಸಂ. | ಹೆಸರು | ಹೊಂದಿದ ಸ್ಥಾನಮಾನ | ದಿನಾಂಕ |
|---|---|---|---|
| 01 | ಡಾ: ಶಿವಕುಮಾರ ಸ್ವಾಮೀಜಿಗಳು | ಸ್ವಾಮೀಜಿಗಳು ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ | 06.02.2019 |
| 02 | ಜಾರ್ಜ್ ಫರ್ನಾಂಡಿಸ್ | ಕೇಂದ್ರದ ಮಾಜಿ ಸಚಿವರು ಹಾಗೂ ಸಮಾಜವಾದಿ ಮತ್ತು ಕಾರ್ಮಿಕ ಮುಖಂಡರು | 06.02.2019 |
| 03 | ಲೋಕನಾಥ್ | ಕನ್ನಡ ಚಲನ ಚಿತ್ರರಂಗ ಹಾಗೂ ರಂಗಭೂಮಿಯ ಹಿರಿಯ ನಟ | 06.02.2019 |

### 03. ನೂತನ ಸದಸ್ಯರ ಪರಿಚಯ

ದಿನಾಂಕ: 06.02.2019ರಂದು ಮಾನ್ಯ ಸಭಾಪತಿಯವರು ನೂತನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ ಇವರನ್ನು ಸದನಕ್ಕೆ ಪರಿಚಯಿಸಿದರು.

### 04. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 02 ಪಟ್ಟಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. (ವಿವರಣಾ ಪಟ್ಟಿ_ 2)

## ೦೫ . ಕಾರ್ಯದರ್ಶಿಯವರ ವರದಿ

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಘನತೆವೆತ್ತ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ದಿನಾಂಕ: **07.02.2019** ರಂದು ಕಾರ್ಯದರ್ಶಿಯವರು ಸದನದಲ್ಲಿ ಮಂಡಿಸಿದರು. **(ವಿವರಣಾ ಪಟ್ಟಿ-3)** ರಲ್ಲಿ ವಿವರಿಸಿದೆ.

## ೦೬. ಪ್ರಶ್ನೆಗಳು

ದಿನಾಂಕ: 06.02.2019 ರಿಂದ 14.02.2019 ರವರೆಗೆ ನಡೆದ ಅಧಿವೇಶನದಲ್ಲಿ ಒಟ್ಟು 671 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 90 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳಾಗಿ ಅಂಗೀಕರಿಸಲಾಗಿರುತ್ತದೆ. ಅವುಗಳ ಪೈಕಿ 16 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 49 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 581 ಪ್ರಶ್ನೆಗಳ ಪೈಕಿ 337 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸಲಾಯಿತು.

## ೦೭. ಶೂನ್ಯವೇಳೆ

ಪ್ರಸ್ತುತ ಅಧಿವೇಶನದಲ್ಲಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳನ್ನು ವಿವರಣಾ ಪಟ್ಟಿ - 4 ರಲ್ಲಿ ವಿವರಿಸಿದೆ.

## ೦೮. ಪ್ರಕಟಣೆ

೦1. ದಿನಾಂಕ:06.02.2019 ರಂದು ವಿಧಾನ ಪರಿಷತ್ತಿನ 137ನೇ ಅಧಿವೇಶನದ ಸದನದ ಕಾರ್ಯಕಲಾಪಗಳನ್ನು ಪ್ರಾಯೋಗಿಕವಾಗಿ ಅಂತರ್ಜಾಲ ತಾಣಗಳಾದ webcast.gov.in/karcouncil & webcast.gov.in/karassembly ನಲ್ಲಿ NIC ವತಿಯಿಂದ ನೇರವಾಗಿ ಪ್ರಸಾರ ಮಾಡಲಾಗುವುದೆಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.-

೦2. ದಿನಾಂಕ: 06.02.2019 ರಂದು ವಿಧಾನ ಪರಿಷತ್ತಿನ 137ನೇ ಅಧಿವೇಶನದಲ್ಲಿ ಮಾನ್ಯ ಸದಸ್ಯರುಗಳು ಸಕ್ರಿಯವಾಗಿ ಪಾಲ್ಗೊಳ್ಳಲು ಅನುಕೂಲವಾಗುವಂತೆ ಪ್ರಚಲಿತ ವಿದ್ಯಮಾನಗಳನ್ನು ಅಂತರ್ಜಾಲ ತಾಣಗಳಿಂದ ಪಡೆದುಕೊಳ್ಳಲು ಅನುವಾಗುವಂತೆ ವಿಧಾನ ಪರಿಷತ್ತಿನ ಪ್ರಾಂಗಣದಲ್ಲಿ ಗಣಕಯಂತ್ರಗಳನ್ನು ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಮಾತ್ರ ಅಳವಡಿಸಲಾಗಿರುತ್ತದೆ. ಇದರ ಸದುಪಯೋಗವನ್ನು ಮಾನ್ಯ ಸದಸ್ಯರುಗಳು ಪಡೆದುಕೊಳ್ಳಬಹುದಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

೦3. ದಿನಾಂಕ: 06.02.2019 ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ರಚಿಸಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

೦4. ದಿನಾಂಕ:13.02.2019 ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿಯನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**09. ನಿಯಯ 59ರ ಮೇರೆಗೆ**

ದಿನಾಂಕ:13.02.2019 ರಂದು ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮಾನ್ಯ ವಿರೋಧ ಪಕ್ಷದ ನಾಯಕರು) ಹಾಗೂ ಇತರರು " ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಹಿರೂರು ಗ್ರಾಮದಲ್ಲಿ ಗಣರಾಜ್ಯೋತ್ಸವದ ದಿನದಂದು ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆದಿರುವ" ವಿಷಯದ ಬಗ್ಗೆ ಚರ್ಚಿಸಲು ಅನುಮತಿ ಕೋರಲಾಗಿದ್ದು, ಸದರಿ ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಲಾಯಿತು.

**10. ವರದಿಗಳನೊಪ್ಪಿಸುವುದು**

ಪ್ರಸ್ತುತ ಅಧಿವೇಶನದಲ್ಲಿ ಸದನದಲ್ಲಿ ಒಪ್ಪಿಸಲಾದ ವರದಿಗಳ ಮಾಹಿತಿಯನ್ನು ವಿವರಣಾ ಪಟ್ಟಿ – 5 ರಲ್ಲಿ ವಿವರಿಸಲಾಗಿದೆ.

**11. ಶಾಸನ ರಚನೆ**

ವಿಧಾನ ಸಭೆಯಲ್ಲಿ ಅಂಗೀಕೃತಗೊಂಡು ವಿಧಾನ ಪರಿಷತ್ತಿನ ಸಹಮತಿ ಪಡೆದಿರುವ ವಿಧೇಯಕಗಳ ಪಟ್ಟಿಗಳನ್ನು (ವಿವರಣಾ ಪಟ್ಟಿ–6) ರಲ್ಲಿ ತೋರಿಸಲಾಗಿದೆ.

**12. ವಿತ್ತೀಯ ಕಾರ್ಯಕಲಾಪಗಳು**

01. ದಿನಾಂಕ:08.02.2019 ರಂದು ಶ್ರೀ ಹೆಚ್.ಡಿ.ಕುಮಾರಸ್ವಾಮಿ, (ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಹಣಕಾಸು ಸಚಿವರು)ಅವರು 2019–20ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸದನದಲ್ಲಿ ಮಂಡಿಸಿದರು.

02. ದಿನಾಂಕ:13.02.2019 ರಂದು ಭಾರತ ಸಂವಿಧಾನ 205(1)(ಎ)ರ ಅನುಚ್ಛೇದದ ಮೇರೆಗೆ 2018–19ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಕಂತು) ಮಾನ್ಯ ಸಭಾನಾಯಕರು ಸದನಕ್ಕೆ ಒಪ್ಪಿಸಿದರು.

**13. ಹಕ್ಕುಚ್ಯುತಿ ಪ್ರಸ್ತಾವನೆ**

ದಿನಾಂಕ:13.02.2019 ರಂದು ಡಾ:ವೈ.ಎ.ನಾರಾಯಣಸ್ವಾಮಿ ಅವರು ಬೆಂಗಳೂರಿನ ಸಂಜಯನಗರದ ಠಾಣಾಧಿಕಾರಿಯವರ ವಿರುದ್ಧ ನೀಡಿರುವ ಹಕ್ಕುಚ್ಯುತಿ ಸೂಚನೆಯನ್ನು ಸದನದಲ್ಲಿ ಮಂಡಿಸಲಾಗಿದ್ದು, ಮಾನ್ಯ ಸಭಾಪತಿಯವರು ಸದರಿ ಸೂಚನೆಯನ್ನು ಪರಿಶೀಲಿಸಲು ಹಕ್ಕುಬಾಧ್ಯತಾ ಸಮಿತಿಗೆ ವಹಿಸಿರುತ್ತಾರೆ.

**14. ಗೈರು ಹಾಜರಾತಿ**

ದಿನಾಂಕ:13.02.2019 ರಂದು "ಶ್ರೀ ಮರಿತಿಬ್ಬೇಗೌಡ ಅವರು ಅನಾರೋಗ್ಯದ ನಿಮಿತ್ತ ವೈದ್ಯರ ಸೂಚನೆಯಂತೆ 137ನೇ ಅಧಿವೇಶನದ ಎಲ್ಲಾ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿರುವ ಬಗ್ಗೆ" ಮಾನ್ಯ ಸಭಾಪತಿಯವರು ಪ್ರಕಟಿಸಿದರು ಹಾಗೂ ಈ ಬಗ್ಗೆ ಸದನದ ಅನುಮತಿ ಪಡೆಯಲಾಯಿತು.

### 15. ಸಭಾಪತಿಯವರ ತೀರ್ಪು

ದಿನಾಂಕ:11.02.2019ರಂದು ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಹಾಗೂ ಇತರರು **ರಾಜ್ಯದ ದಿನಪತ್ರಿಕೆಗಳಲ್ಲಿ ಆಡಿಯೋ ಧ್ವನಿ ಸುರಳಿಯಲ್ಲಿ ಶಾಸಕರುಗಳ ಖರೀದಿ ಬಗ್ಗೆ ಮಾತನಾಡಿದ ವಿಚಾರಗಳು ಪ್ರಕಟಗೊಂಡಿರುವ ಕುರಿತು** ನಿಯಮ 342ರಡಿಯಲ್ಲಿ ಚರ್ಚಿಸಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನೀಡಿರುವ ಸೂಚನೆಯ ಸಂಬಂಧದಲ್ಲಿ ಪ್ರತಿಯೊಂದು ಸದನವು ಅದರ ವ್ಯವಹರಣೆಗೆ ಸಂಬಂಧಿಸಿದಂತೆ ಅವುಗಳೇ ಸರ್ವೋಚ್ಛವಾದುದಾಗಿರುವುದರಿಂದ ಅಲ್ಲದೆ ಒಂದು ಸದನದ ಸದಸ್ಯರ ಕುರಿತಾದ ವಿಷಯವನ್ನು ಮತ್ತೊಂದು ಸದನದಲ್ಲಿ ಚರ್ಚಿಸುವುದು ಸೂಕ್ತವಲ್ಲವೆಂದು ಈ ಹಿಂದೆ ಹಲವಾರು ಪ್ರಕರಣಗಳಲ್ಲಿ ಅಂದಿನ ಸಭಾಪತಿಯವರುಗಳು ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ಹಾಗೂ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವಿಷಯವು ವಿಧಾನಸಭೆಯ ಸದಸ್ಯರುಗಳಿಗೆ ಸಂಬಂಧಿಸಿದ್ದಾಗಿರುವುದರಿಂದ ಚರ್ಚೆಗೆ ತೆಗೆದುಕೊಳ್ಳುವುದು ಸೂಕ್ತವಲ್ಲವೆಂದು ಮಾನ್ಯ ಸಭಾಪತಿಯವರು ತೀರ್ಪನ್ನು ನೀಡಿದರು.

### 16. ಧರಣಿ ಮತ್ತು ಸಭಾತ್ಯಾಗ

01. ದಿನಾಂಕ:07.02.2019 ರಂದು "ಆಡಳಿತ ಪಕ್ಷದ ವಿರುದ್ಧ ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಧಾವಿಸಿ ಸರ್ಕಾರದ ವಿರುದ್ಧ ಫಲಕಗಳ್ನು ಪ್ರದರ್ಶಿಸುತ್ತಾ" ಧರಣಿ ನಡೆಸಿದರು.

02. ದಿನಾಂಕ:11.02.2019 ರಂದು " ರಾಜ್ಯದ ದಿನಪತ್ರಿಕೆಗಳಲ್ಲಿ ಆಡಿಯೋ ಧ್ವನಿ ಸುರಳಿಯಲ್ಲಿ ಶಾಸಕರುಗಳ ಖರೀದಿ ಬಗ್ಗೆ ಮಾತನಾಡಿದ ವಿಚಾರಗಳು ಪ್ರಕಟಗೊಂಡಿರುವ ಕುರಿತು" ಆಡಳಿತ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಧಾವಿಸಿ ಧರಣಿ ನಡೆಸಿದರು.

03. ದಿನಾಂಕ: 12.02.2019 ಮತ್ತು 13.02.2019 ರಂದು " ಪ್ರಶ್ನೆ ಸಂಖ್ಯೆ:41(217)ಕ್ಕೆ ಸಚಿವರು ನೀಡಿದ ಉತ್ತರಕ್ಕೆ ವಿರೋಧ ವ್ಯಕ್ತಪಡಿಸುತ್ತಾ," ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಧರಣಿಯನ್ನು ನಡೆಸಿದರು.

04. ದಿನಾಂಕ:13.02.2019 ಮತ್ತು 14.02.2019 ರಂದು " ಹಾಸನದಲ್ಲಿ ಶಾಸಕರೊಬ್ಬರ ಮನೆ ಮೇಲೆ ದಾಂಧಲೆ ನಡೆಸಿರುವ ಕುರಿತು " ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಧಾವಿಸಿ ಧರಣಿ ನಡೆಸಿದರು.

### 17. ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ

ಶ್ರೀ ಹೆಚ್.ಎಂ.ರೇವಣ್ಣ ಅವರು ಆಯವ್ಯಯ ಭಾಷಣದ ಮೇಲೆ ಚರ್ಚೆ ಪ್ರಾರಂಭ ಮಾಡಿದರು.

**ಗದ್ದಲ**

ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿಯನ್ನು ಮುಂದುವರೆಸಿದ್ದರ ಹಿನ್ನಲೆಯಲ್ಲಿ ಸದನವನ್ನು ಮದ್ಯಾಹ್ನಕ್ಕೆ ಮುಂದೂಡಲಾಯಿತು.

**18. ಅಧಿವೇಶನ ಮುಂದೂಡಿಕೆ**

ದಿನಾಂಕ:06.02.2019ರಂದು ಪ್ರಾರಂಭಗೊಂಡ ವಿಧಾನ ಪರಿಷತ್ತಿನ 137ನೆಯ ಅಧಿವೇಶನವನ್ನು ದಿನಾಂಕ:14.02.2019ರಂದು ರಾಷ್ಟ್ರಗೀತೆಯೊಂದಿಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು.

**ಕೆ.ಆರ್.ಮಹಾಲಕ್ಷ್ಮಿ**
**ಕಾರ್ಯದರ್ಶಿ(ಪ್ರ)**

**ವಿವರಣಾ ಪಟ್ಟಿ–1**

| ಕ್ರಮ ಸಂಖ್ಯೆ | ಅಧಿವೇಶನ ನಡೆದ ದಿನಾಂಕ | ಪ್ರಾರಂಭಗೊಂಡ ಸಮಯ | ಅಂತ್ಯಗೊಂಡ ಸಮಯ | ಒಟ್ಟು ಸಮಯ |
|---|---|---|---|---|
| 1. | 06.02.2019 | ಬೆ:11.50 | ಮ:12.38 | 00.48 |
| 2. | 07.02.2019 | ಬೆ:10.45<br>ಮ:12.30<br>ಮ:3.10 | ಬೆ:10.50<br>ಮ:12.35<br>ಮ:3.15 | 00.05<br>00.05<br>00.05 |
| 3. | 08.02.2019 | ಸಾ:4.05 | ಸಾ:4.08 | 00.03 |
| 4. | 09.02.2019 | ರಜಾ ದಿನಗಳು | | |
| 5. | 10.02.2019 | | | |
| 6. | 11.02.2019 | ಬೆ:11.25<br>ಬೆ:11.52<br>ಮ:1.24<br>ಮ:3.45 | ಬೆ:11.35<br>ಮ:12.00<br>ಮ:1.43<br>ಸಾ:5.48 | 00.10<br>00.08<br>00.19<br>02.03 |
| 7. | 12.02.2019 | ಬೆ:11.05<br>ಮ: 02.05 | ಮ: 12.35<br>ಮ: 02.30 | 01.30<br>00.25 |
| 8. | 13.02.2019 | ಬೆ:11.30<br>ಮ: 03.40<br>ಸಾ:04.46 | ಮ: 1.40<br>ಸಾ:04.16<br>ಸಾ:04.49 | 02.10<br>00.36<br>00.03 |
| 9. | 14.02.2019 | ಬೆ:11.15<br>ಮ: 01.10<br>ಮ:03.37<br>ಸಾ:04.41 | ಮ: 12.15<br>ಮ:01.30<br>ಮ:03.53<br>ಸಾ:04.55 | 01.00<br>00.20<br>00.16<br>00.14 |
| | | | **ಒಟ್ಟು ಸಮಯ:** | 10.20 |

**ವಿವರಣಾ ಪಟ್ಟಿ–3**
**ಘನತೆವೆತ್ತ ರಾಷ್ಟ್ರಪತಿ ಮತ್ತು ರಾಜ್ಯಪಾಲರಿಂದ ಒಪ್ಪಿಗೆ ಪಡೆದಿರುವ ವಿಧೇಯಕಗಳ ಪಟ್ಟಿ**

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 01. | ಕರ್ನಾಟಕ ಸಿವಿಲ್ ಸೇವೆಗಳ (ನೇಮಕಾತಿಯ ಸಮಯದಲ್ಲಿ ಅಭ್ಯರ್ಥಿಗಳ ಆಯ್ಕೆಯ ಕಾರ್ಯವಿಧಾನ)ವಿಧೇಯಕ, 2018 | 03.01.2019 | ರಾಜ್ಯಪಾಲರು |
| 02. | ಕರ್ನಾಟಕ ಧನವಿನಿಯೋಗ ( ಸಂಖ್ಯೆ–3)ವಿಧೇಯಕ 2018 | 07.01.2019 | ರಾಜ್ಯಪಾಲರು |
| 03. | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ)ವಿಧೇಯಕ, 2018 | 18.01.2019 | ರಾಜ್ಯಪಾಲರು |

**ವಿವರಣಾ ಪಟ್ಟಿ–4**
**ಶೂನ್ಯವೇಳೆ ಪ್ರಸ್ತಾವಗಳು**

| ಕ್ರ. ಸಂ | ಸದಸ್ಯರ ಹೆಸರು ಶ್ರೀಮತಿ/ಶ್ರೀಯುತರುಗಳಾದ | ಸದನದಲ್ಲಿ ಚರ್ಚಿಸಿದ ದಿನಾಂಕ | ವಿಷಯ | ಷರಾ |
|---|---|---|---|---|
| 01 | **ಎಂ.ಪಿ.ಸುನೀಲ್ ಸುಬ್ರಮಣಿ** | 13.02.2019 | ಕೊಡಗು ಜಿಲ್ಲೆಯಲ್ಲಿ ಹೊಸದಾಗಿ ಒಂದು ತಾಲ್ಲೂಕನ್ನು ರಚಿಸಿ ಅದಕ್ಕೆ ಕಾವೇರಿ ತಾಲ್ಲೂಕು ಎಂದು ಹೆಸರಿಡುವ ಬಗ್ಗೆ. | ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 02 | **ಶರಣಪ್ಪ ಮಟ್ಟೂರು** | 13.02.2019 | ರಾಜ್ಯದಲ್ಲಿ ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಗಳಡಿಯಲ್ಲಿ ಆಯ್ಕೆಯಾಗಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಎಂಟು ತಿಂಗಳಿನಿಂದ ಹಾಗೂ ಕಲಬುರಗಿ ವಿಭಾಗದ ಪ್ರೌಢಶಾಲಾ ಶಿಕ್ಷಕರಿಗೆ ಮೂರು ತಿಂಗಳಿನಿಂದ ವೇತನ ಪಾವತಿಯಾಗದಿರುವ ಬಗ್ಗೆ. | ದಿನಾಂಕ:14.02.2019 ರಂದು ಉತ್ತರವನ್ನು ಮಂಡಿಸಲಾಯಿತು. |
| 03 | **ಅರುಣ ಶಹಾಪೂರ** | 13.02.2019 | ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಯೋಗದಲ್ಲಿದ್ದ ಕೆಲ ಸದಸ್ಯರು ದೆಹಲಿಯಲ್ಲಿರುವ ಕರ್ನಾಟಕ ಭವನದಲ್ಲಿ ಮದ್ಯಪಾನ ಮಾಡಿ ಗಲಾಟೆ ಎಬ್ಬಿಸಿದ್ದು ಇದರಿಂದಾಗಿ ತಮಗೆ ತೊಂದರೆಯಾಗಿರುವುದೆಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳು ಪೋಲೀಸ್ ಠಾಣೆಗೆ ದೂರು ನೀಡಿರುವ ಬಗ್ಗೆ ಪತ್ರಿಕೆಯಲ್ಲಿ ಪ್ರಕಟಗೊಂಡಿರವ ಕುರಿತು. | ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 04 | **ಕವಟಗಿಮಠ** | 13.02.2019 | ವಿಶ್ವೇಶ್ವರಯ್ಯ ತಾಂತ್ರಿಕ | ಸಂಬಂಧಪಟ್ಟ ಸಚಿವರಿಂದ |

| | | | | |
|---|---|---|---|---|
| | **ಮಹಾಂತೇಶ್ ಮಲ್ಲಿಕಾರ್ಜುನ** | | ವಿಶ್ವವಿದ್ಯಾಲಯದ ವಿಭಜನೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವ ವಿಷಯದ ಬಗ್ಗೆ. | ಉತ್ತರವನ್ನು ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 05 | **ಬಸವರಾಜ ಶಿವಲಿಂಗಪ್ಪ ಹೊರಟ್ಟಿ** | 13.02.2019 | ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಯೋಜನೆಯಡಿಯಲ್ಲಿ ರಾಜಾದ್ಯಂತ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ಹಾಗೂ ಒಳಗುತ್ತಿಗೆ ನೌಕರರಗಳ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರ ನಡೆಸುತ್ತಿರುವ ಬಗ್ಗೆ. | ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 06 | **ಎಸ್.ವ್ಹಿ. ಸಂಕನೂರ** | 13.02.2019 | ಹುಬ್ಬಳ್ಳಿ-ಧಾರವಾಡ ಹಾಗೂ ಇನ್ನಿತರೆ ಜಿಲ್ಲೆಗಳಲ್ಲಿಯ ಅನುದಾನಿತ ಶಿಕ್ಷಣ ಸಂಸ್ಥೆಗಳ ಪ್ರಾಥಮಿಕ ಶಾಲಾ ಶಿಕ್ಷಕರ ವೇತನ ಬಿಡುಗಡೆಯಾಗದಿರುವ ಕುರಿತು. | ದಿನಾಂಕ:14.02.2019 ರಂದು ಉತ್ತರವನ್ನು ಮಂಡಿಸಲಾಯಿತು. |

**ವಿವರಣಾ ಪಟ್ಟಿ -05**
**ಸದನಕ್ಕೆ ಒಪ್ಪಿಸಲಾದ ವರದಿಗಳ ಪಟ್ಟಿ**

| ಕ್ರ. ಸಂ | ಸಮಿತಿಯ ಹೆಸರು | ಒಪ್ಪಿಸಿದ ದಿನಾಂಕ | ವರದಿಯ ಸಂಖ್ಯೆ |
|---|---|---|---|
| 01 | ವಿಧಾನ ಮಂಡಲದ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿ | 13.02.2019 | 34ನೇ ವರದಿ |
| 02 | ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ | 13.02.2019 | ಮೊದಲನೇ ವರದಿ |
| 03 | ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ | 14.02.2019 | 27ನೇ ವರದಿ |

**ವಿವರಣಾ ಪಟ್ಟಿ –06**
**ವಿಧಾನ ಸಭೆಯಲ್ಲಿ ಅಂಗೀಕೃತಗೊಂಡು ವಿಧಾನ ಪರಿಷತ್ತಿನ**
**ಸಹಮತಿ ಪಡೆದಿರುವ ವಿಧೇಯಕಗಳ ವಿವರ**

| ಕ್ರ ಸಂ | ವಿಧೇಯಕದ ಹೆಸರು | ವಿ .ಸ ಅಂಗೀಕರಿಸಿರುವ ದಿನಾಂಕ | ವಿ. ಪ ಅಂಗೀಕರಿಸಿರುವ ದಿನಾಂಕ |
|---|---|---|---|
| 01 | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ)(ತಿದ್ದುಪಡಿ)ವಿಧೇಯಕ, 2018 | 13.02.2019 | 14.02.2019 |
| 02 | ಭೂ ಸ್ವಾಧೀನ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯಲ್ಲಿ  ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು (ಕರ್ನಾಟಕ ತಿದ್ದುಪಡಿ) ವಿಧೇಯಕ, 2019 | 13.02.2019 | 14.02.2019 |
| 03 | ಬಸವಕಲ್ಯಾಣ ಅಭಿವೃದ್ಧಿ ಮಂಡಳ(ತಿದ್ದುಪಡಿ)ವಿಧೇಯಕ, 2019 | 13.02.2019 | 14.02.2019 |
| 04 | ಕರ್ನಾಟಕ ಋಣ ಪರಿಹಾರ ವಿಧೇಯಕ, 2018 | 13.02.2019 | 14.02.2019 |
| 05 | ಎನ್‌ಐಇ ವಿಶ್ವವಿದ್ಯಾಲಯ ವಿಧೇಯಕ, 2019 | 13.02.2019 | 14.02.2019 |
| 06 | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ)ವಿಧೇಯಕ, 2019 | 13.02.2019 | 14.02.2019 |
| 07 | ಆದಿಚುಂಚನಗಿರಿ ವಿಶ್ವವಿದ್ಯಾಲಯ ವಿಧೇಯಕ, 2019 | 13.02.2019 | 14.02.2019 |
| 08 | ಆರ್.ವಿ.ವಿಶ್ವವಿದ್ಯಾಲಯ ವಿಧೇಯಕ, 2019 | 13.02.2019 | 14.02.2019 |
| 09 | ಕರ್ನಾಟಕ ಧನವಿನಿಯೋಗ ವಿಧೇಯಕ, 2019 | 14.02.2019 | 14.02.2019 |
| 10 | ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2019 | 14.02.2019 | 14.02.2019 |
| 11 | ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ)ವಿಧೇಯಕ , 2018 | 14.02.2019 | 14.02.2019 |

******

(ದಿನಾಂಕ:21.06.2019 ರಂದು ಮುದ್ರಣಕ್ಕಾಗಿ ಕಳುಹಿಸಲಾಗಿದೆ)